19.95 ಲಕ್ಷಗಳ ಅಂದಾಜಿನಲ್ಲಿ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಇವುಗಳನ್ನು ಹೊರತುಪಡಿಸಿ ವಿ.ಸಿ. ನಾಲಾ ಅಚ್ಚುಕಟ್ಟಿನಲ್ಲಿ ಬರುವ ನಾಲೆಗಳ ಮತ್ತು ಇತರೆ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಅವಶ್ಯಕತೆ ಮತ್ತು ಅಗತ್ಯತೆಯನ್ನು ಮನಗಂಡು ಅನುದಾನದ ಲಭ್ಯತೆ ಮೇರೆಗೆ ಕಾರ್ಯಕ್ರಮ ರೂಪಿಸಿ ಹಂತ ಹಂತವಾಗಿ ಕೈಗೊಳ್ಳಲಾಗುವುದು

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಹನಿ ನೀರಾವರಿ ಪದ್ಧತಿಯ ಅಳವಡಿಕೆ ಕುರಿತು

4201 (4954) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ವಲಯದಲ್ಲಿ ಯಾವ ಯಾವ ಬೆಳೆಗಳಿಗೆ "ಹನಿ ನೀರಾವರಿ" ಸೌಲಭ್ಯವನ್ನು ಬಳಸಲಾಗುತ್ತಿದೆ;

ಆ) ರಾಜ್ಯದಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾದ, ಕಬ್ಬಿನ ಬೆಳೆಗೆ "ಹನಿ ನೀರಾವರಿ ಪದ್ಧತಿ" ಅಳವಡಿಸಬೇಕಾದ ಅನಿವಾರ್ಯತೆಯನ್ನು ಸರ್ಕಾರವು ಮನಗಂಡಿದೆಯೇ;

ಇ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರದ ನಿಲುವೇನು;

ಈ) "ಹನಿ ನೀರಾವರಿ" ಪದ್ಧತಿಯನ್ನು ಕಬ್ಬಿನ ಬೆಳೆಯಲ್ಲಿ ಅನುಷ್ಠಾನಕ್ಕೆ ತರಲು ಸರ್ಕಾರದ ಪ್ರಯತ್ನವೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ರಾಜ್ಯದ ಕೃಷಿ ವಲಯದಲ್ಲಿ ಹನಿ ನೀರಾವರಿ ಸೌಲಭ್ಯವನ್ನು ಕಬ್ಬು ಮತ್ತು ಹತ್ತಿ ಬೆಳೆಗಳಿಗೆ ಬಳಸಲಾಗುತ್ತಿದೆ.

ಆ) ಹೌದು.

ಇ) ಸರ್ಕಾರವು ಕಬ್ಬು ಬೆಳೆಗಾರರಿಗೆ ಹನಿ ನೀರಾವರಿ ಸೌಲಭ್ಯ ಕಲ್ಪಿಸಲು ಪ್ರೋತ್ಸಾಹ ನೀಡಲು ಬದ್ಧವಾಗಿದೆ.

ಈ) 2003-04 ನೇ ಸಾಲಿನಲ್ಲಿ ಹನಿ ನೀರಾವರಿ ಯೋಜನೆಯಡಿ ರೂ. 10 ಕೋಟಿಗಳ ಕಾರ್ಯಕ್ರಮವನ್ನು ಘೋಷಿಸಿದ್ದು, ಶೇಕಡಾ 50 ರ ರಿಯಾಯಿತಿ ದರದಲ್ಲಿ ಕಬ್ಬಿನ ಬೆಳೆಗೂ ಸಹ ಹನಿ ನೀರಾವರಿ ಘಟಕಗಳ ವಿತರಣೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ:

ರಾಜ್ಯದಲ್ಲಿ ಕೃಷಿ ಉತ್ಪನ್ನಗಳಿಗೆ ರಫ್ತಿನ ಸೌಲಭ್ಯ ಕುರಿತು

4203 (4956) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕಾ ಬೆಳೆಯ ಕೃಷಿ ಪ್ರದೇಶದ ವಿಸ್ತೀರ್ಣವೆಷ್ಟು;

ಆ) ತೋಟಗಾರಿಕೆಯ ಕೃಷಿಯಲ್ಲಿನ ಉತ್ಪನ್ನಗಳಲ್ಲಿ ಯಾವ್ಯಾವ ಉತ್ಪನ್ನಗಳನ್ನು ರಫ್ತು ಯೋಗ್ಯವೆಂದು ಗುರುತಿಸಲಾಗಿದೆ;

ಇ) ಹಾಗೆ ಗುರುತಿಸಲಾಗಿರುವ ರಫ್ತು ಯೋಗ್ಯ ತೋಟಗಾರಿಕಾ ಕೃಷಿ ಉತ್ಪನ್ನಗಳಿಗೆ ಸರಕಾರದಿಂದ ನೀಡುತ್ತಿರುವ ಸೌಲಭ್ಯ ಮತ್ತು ದೊರಕುತ್ತಿರುವ ಪ್ರೋತ್ಸಾಹ ವಿವರಗಳೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಒಟ್ಟು ಪ್ರದೇಶ 15.30 ಲಕ್ಷ ಹೆಕ್ಟೇರ್‌ಗಳು

ಆ) ಮಾವು, ವೆನಿಲ್ಲಾ, ಕಲ್ಲಂಗಡಿ, ದ್ರಾಕ್ಷಿ ದಾಳಿಂಬೆ, ಪಪ್ಪಾಯಿ, ಕದಂಬ ಹಣ್ಣು, ಗುಲಾಬಿ ಈರುಳ್ಳಿ, ಮಿಡಿ ಸೌತೇಕಾಯಿ, ಆಲೂಗೆಡ್ಡೆ, ಗೋಡಂಬಿ, ಅರಶಿನ, ಹೂಗಳು, ಅಣಬೆ ಸಂಸ್ಕರಿಸಿ ಇತರೇ ಪದಾರ್ಥಗಳು ಮತ್ತು ಸಾಂಬಾರು ಪದಾರ್ಥಗಳು ರಫ್ತು ಯೋಗ್ಯವೆಂದು ಗುರುತಿಸಲಾಗಿದೆ.

ಇ) ಸರ್ಕಾರ ನೀಡುತ್ತಿರುವ ಸೌಲಭ್ಯ ಮತ್ತು ಪ್ರೋತ್ಸಾಹದ ವಿವರಗಳು:

1. ಗುಲಾಬಿ ಈರುಳ್ಳಿ, ಗರ್ಕಿನ್ಸ್ ಮತ್ತು ಪುಷ್ಪೋದ್ಯಮಗಳಿಗೆ ರಫ್ತು ವಲಯಗಳನ್ನು ಭಾರತ ಸರಕಾರದ ಸಹಯೋಗದೊಂದಿಗೆ ಸ್ಥಾಪಿಸಿದ. ಹಾಗೂ ಮಾವು, ದ್ರಾಕ್ಷಿ, ವೆನಿಲ್ಲಾ, ದಾಳಿಂಬೆ, ನಿಂಬೆ, ಔಷಧೀಯ ಹಾಗೂ ಸುಗಂಧದ್ರವ್ಯ ಬೆಳೆಗಳಿಗೆ ಕೃಷಿ ರಫ್ತು ವಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

2. ರಫ್ತು ಉತ್ತೇಜನ ನೀತಿ (2002–2007) ಯನ್ನು ಪ್ರಕಟಿಸಿದೆ.

3. ಕೇಂದ್ರ ಸರ್ಕಾರದ ಅಸೈಡ್ ಯೋಜನೆಯ ಅಡಿಯಲ್ಲಿ ಹಣ ಪಡೆದು ಮೂಲಭೂತ ಸೌಕರ್ಯಗಳಾದ ಸಂಗ್ರಹಣಾ ಕೇಂದ್ರಗಳು, ವಿಂಗಡಣೆ, ವಾಷಿಂಗ್, ಪ್ಯಾಕಿಂಗ್ ಸೌಲಭ್ಯ, ಹವಾನಿಯಂತ್ರಿತ ಸಾಗಾಣಿಕೆ, ಪ್ರೀಕೂಲಿಂಗ್, ಶೀತಲಗೃಹಗಳು, ಮಧ್ಯಂತರ ಶೀತಲ ಗೃಹಗಳು, ಸಂಸ್ಕರಣ ಘಟಕಗಳು ಮತ್ತು ರಫ್ತು ಸಂಕೀರ್ಣಗಳನ್ನು ಸೃಷ್ಟಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು.

4. ಪುಷ್ಪೋದ್ಯಮದ ಅಭಿವೃದ್ಧಿಗೆ ಅಂತರ ರಾಷ್ಟ್ರೀಯ ಮಟ್ಟದ ಹರಾಜು ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ.

5. ರಾಜ್ಯದಲ್ಲಿನ ರೈತ ಸಂಪರ್ಕ ಕೇಂದ್ರಗಳಿಂದ ಮಾರುಕಟ್ಟೆ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ.

6. ಕೃಷಿ/ತೋಟಗಾರಿಕೆ ಉತ್ಪನ್ನಗಳ ರಫ್ತಿನ ಅಭಿವೃದ್ಧಿಗಾಗಿ ಕೆಪೆಕ್ ಸಂಸ್ಥೆಯನ್ನು ಸ್ಥಾಪಿಸಿದೆ. ಹೂವುಗಳ ಮಾರಾಟಕ್ಕಾಗಿ ಕೆ.ಎ.ಐ.ಸಿ. ವತಿಯಿಂದ ಹೂವು ಹರಾಜು ಕೇಂದ್ರವನ್ನು ಸ್ಥಾಪಿಸಲಾಗಿದೆ.

7. ಕೂಯ್ಲಿನ ನಂತರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಶೀತಲ ಗೃಹಗಳು ಉಪಯೋಗಿಸುವ ವಿದ್ಯುಚ್ಛಕ್ತಿಯ ಪ್ರತಿ ಯೂನಿಟ್‌ಗೆ ರೂ. 1/– ರಂತೆ ಸಹಾಯಧನ ನೀಡಲಾಗುತ್ತಿದೆ.

8. ಕೇಂದ್ರ ಸರ್ಕಾರದ ಎನ್.ಹೆಚ್.ಬಿ., ಅಪೆಡಾ, ಸಿ.ಡಿ.ಬಿ., ಎನ್.ಸಿ.ಡಿ.ಸಿ., ಆಹಾರ ಸಂಸ್ಕರಣ ಮಂತ್ರಾಲಯ ಮತ್ತು ವಿವಿಧ ಮಂಡಳಿಗಳಿಂದ ಹಣ ಕಾಸಿನ ನೆರವನ್ನು ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ, ಶೇಖರಣೆ ಹಗೂ ಮಾರುಕಟ್ಟೆಗಾಗಿ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ.

9. ರಾಜ್ಯದಲ್ಲಿ ತೋಟಗಾರಿಕೆ ಉತ್ಪನ್ನಗಳ ವೈಜ್ಞಾನಿಕ ಸಂಸ್ಕರಣೆ, ಮಾರುಕಟ್ಟೆ ಮತ್ತು ರಫ್ತುನ್ನು ಉತ್ತೇಜಿಸಲು 6 ಆಹಾರ ಮತ್ತು ಕೃಷಿ ತಂತ್ರಜ್ಞಾನ ಪಾರ್ಕುಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಧಾರವಾಡ ಮಹಾನಗರದಲ್ಲಿ ರೈತ ಸಂತೆಯನ್ನು ಪ್ರಾರಂಭಿಸುವ ಬಗ್ಗೆ

4208 (4930) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಮಹಾನಗರದಲ್ಲಿ ರೈತ ಸಂತೆ ಪ್ರಾರಂಭಿಸುವ ಯೋಜನೆ ಸರ್ಕಾರಕ್ಕಿದೆಯೇ; ಹಾಗಾದರೆ ಸಂತೆ ನಡೆಸಲು ಅವಶ್ಯಕವಾದ ಮೂಲಭೂತ ಸೌಕರ್ಯಗಳೇನು;